(ಇ) ಈ ಆಸ್ಪತ್ರೆಗಳು ಕಾರ್ಯನಿರತವಾಗಿವೆಯೊ ಅಥವಾ ಇಲ್ಲವೆ?

ಶ್ರೀ ಸಿದ್ದರಾಮಯ್ಯ, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

(ಅ) ೧೧ ಪಶುವೈದ್ಯ ಶಾಲೆಗಳು (ಹನ್ನೊಂದು)

(ಆ) ತರೀಕೆರೆ ತಾಲ್ಲೂಕಿಗೆ ೧೯೮೨-೮೩ನೇ ಸಾಲಿನಲ್ಲಿ ಒಂದು ಗ್ರಾಮೀಣ ಪಶುವೈದ್ಯ ಶಾಲೆ ಮಂಜೂರಾಗಿರುತ್ತದೆ ೧೯೮೩-೮೪ ಮತ್ತು ೧೯೮೪-೮೫ನೇ ಸಾಲುಗಳಲ್ಲಿ ಸದರಿ ತಾಲ್ಲೂಕಿಗೆ ಪಶುವೈದ್ಯ ಆಸ್ಪತ್ರೆಗಳು ಮಂಜೂರಾಗಿರುವುದಿಲ್ಲ.

(ಇ) ಇಲ್ಲ.

ತರೀಕೆರೆ ತಾಲ್ಲೂಕಿನಲ್ಲಿ ವಿದ್ಯುತ್ ಉಪಕೇಂದ್ರಗಳು

೮೩೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ವಿದ್ಯುತ್ ಉಪ ಕೇಂದ್ರಗಳಿವೆ.

ಆ) ಲಕ್ಕವಳ್ಳಿ ಮತ್ತು ಕಡ್ಲೂರಿನಲ್ಲಿ ಉಪ ಕೇಂದ್ರ ತೆರೆಯುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ಓದ್ಯುತ್ ರಾಜ್ಯ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ೬ ಶಾಖಾ ಕಚೇರಿ (ಸೆಕ್ಷನ್ ಆಫೀಸ್)ಗಳಿವೆ.

ಆ) ಲಕ್ಕವಳ್ಳಿಯಲ್ಲಿ ಲೆಕ್ಕ ರಹಿತ ಶಾಖಾ ಕಚೇರಿ ತೆರೆಯಲು ವಿವರ ಸಂಗ್ರಹಿಸಿದ್ದು ಇದರ ಮಂಡಳಿಯ ಪರಿಶೀಲನೆಯಲ್ಲಿದೆ. ಕಡ್ಲೂರಿನಲ್ಲಿ ಒಂದು ಲೆಕ್ಕ ರಹಿತ ಶಾಖಾ ಕಚೇರಿ ಸ್ಥಾಪಿಸಲು ವಿವರ ಸಂಗ್ರಹಿಸಲಾಗುತ್ತಿದೆ. ಇವುಗಳ ಬಗ್ಗೆ ಮಂಡಳಿ ಸೂಕ್ತ ತೀರ್ಮಾನವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತದೆ.

ಇ) ವಿದ್ಯುಚ್ಛಕ್ತಿ ಮಂಡಳಿಯು ಇವುಗಳ ಬಗ್ಗೆ ಆದಷ್ಟು ಬೇಗ ತೀರ್ಮಾನ ಕೈಗೊಳ್ಳುತ್ತದೆ.

ನೇರಲೇಕೆರೆಗೆ ಪಶುವೈದ್ಯ ಶಾಲೆ ಮಂಜೂರಾತಿ

೮೮೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕು ನೇರಲೇಕೆರೆ ಗ್ರಾಮಕ್ಕೆ ಪಶುವೈದ್ಯ ಶಾಲೆ ಮಂಜೂರಾತಿ ಆಗಿದೆಯೇ?

ಆ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಿಂದ ನೇರಲೇಕೆರೆ ಗ್ರಾಮದ ಪಶುವೈದ್ಯ ಶಾಲೆಗೆ ಆಡಳಿತಾತ್ಮಕ ಮಂಜೂರಾತಿಗಾಗಿ ಶಿಫಾರಸ್ಸು ಮಾಡಲಾಗಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ೧೯೮೨-೮೩ನೇ ಸಾಲಿನಲ್ಲಿ ತರೀಕೆರೆ ತಾಲ್ಲೂಕು ನೇರಲೇಕೆರೆ ಗ್ರಾಮಕ್ಕೆ ಒಂದು ಗ್ರಾಮಾಂತರ ಪಶುವೈದ್ಯ ಶಾಲೆ ಮಂಜೂರಾಗಿದ್ದು, ಆಗ ಸಿಬ್ಬಂದಿಗಳ ಕೊರತೆ ಇದ್ದುದರಿಂದ ಪ್ರಾರಂಭವಾಗಿರುವುದಿಲ್ಲ.

ಆ) –ಇಲ್ಲ–

ಇ) ಉದ್ಭವಿಸುವುದಿಲ್ಲ.